ಶ್ರೀ ಜೆ. ಹೆಚ್. ಪಟೇಲ್.—ಎಲೆಕ್ಟ್ರಿಸಿಟಿ ವಿತರಣೆ ಮಾಡುವುದಕ್ಕೆ ಕೋ-ಆಪರೇಟೀವ್ ಮಾಡ ಬೇಕೆಂದು ಸರ್ಕಾರದ ಒಂದು ಪಾಲಿಸಿ ಇದೆ Actually, registration and everything will be handled by Co-operative Dept. ಆದರ Power Distribution ಇದ್ದರೂ Registration and other thing comes under co-operative. ಅವರು ಯಾವ ಸಂಘವನ್ನು ಸ್ಥಾಪನೆ ಮಾಡಬೇಕೆಂದು ಉದ್ದೇಶ ಪಟ್ಟಿದ್ದಾರೆ ಅದನ್ನು ತರಿಸಿ ನೋಡುತ್ತೇನೆ.

ಖ) ಮಂಲ್ಲೇಶ್ವರಂ ರಾಜಾಜಿನಗರ ೬೦ ಅಡಿ ರಸ್ತೆಯ ಇಕ್ಕೆಲಗಳಲ್ಲಿ ರುವ ಖಾಲಿ ಜಾಗ ದಲ್ಲಿ ಆಟದ ಮೈದಾನವನ್ನು ರಚಿಸಲು ಒತ್ತಾಯ

ಶ್ರೀ ಎಂ. ಎಸ್. ಕೃಷ್ಣನ್.—(ರಾಜಾಜಿನಗರ), ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದ ೧೭ನೇ ಕ್ರಾಸ್ ಮಲ್ಲೇಶ್ವರಂನಿಂದ ರಾಜಾಜಿನಗರದ ೬೦ ಅಡಿ ರಸ್ತೆಗೆ ಒಂದು ಸೇತುವೆ ಕಟ್ಟಲಾಗಿದೆ. ಈಸೇತುವೆಯ ಇಕ್ಕೆಲೆಗಳಲ್ಲಿ, ಸುಬ್ರಮಣ್ಯನಗರದಲ್ಲಿ ಎರಡೂ ಕಡೆಗಳಲ್ಲಿ ಸಾಕಷ್ಟು ಖಾಲಿ ಜಾಗ ಇದೆ. ಈ ಜಾಗದಲ್ಲಿ ಬಂದಡೆ ಉದ್ಯಾನವನ ಇನ್ನೊಂದೆಡೆ ಆಟದ ಮೈದಾನವನ್ನು ರಚಿಸಬೇಕೆಂದು ನಾನು ಸುಮಾರು ೧೦ ವರ್ಷಗಳಿಂದ ಸರ್ಕಾರವನ್ನು ಬೆಂಗಳೂರು ಮಹಾ ನಗರ ಪಾಲಿಕೆಯನ್ನು ಒತ್ತಾಯ ಪಡಿಸುತ್ತಾ ಬಂದಿದ್ದೇನೆ. ಇದುವರೆವಿಗೂ ಸಮಸ್ಯೆ ಇತ್ಯರ್ಥವಾಗಿಲ್ಲ. ಬದಲು ಕಾರ್ಪೊರೇಷನ್‌ನ ನಿಷ್ಕ್ರಿಯೆ ಮತ್ತು ಶಾಮೀಲಾಗುವ ಪ್ರವೃತ್ತಿಯಿಂದ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಕೋರ್ಟಿನಿಂದ ತಡೆಯಾಜ್ಞೆ ತಂದು ಈ ಪದೇಶ ತಮ್ಮದೇ ಎಂದು ಹೇಳಿದ್ದಾರೆ. ಈ ತಡೆಯಾಜ್ಞೆಯನ್ನು ತೆರವು ಮಾಡ ಬೇಕೆಂದು ಒತ್ತಾಯ ಮಾಡುತ್ತಿದ್ದರೂ ಸಹ, ಕಾರ್ಪೊರೇಷನ್‌ನವರು ಪರಿಣಾಮಕಾರಿ ಕಾರ್ಯಕ್ರಮ ಕೈಗೊಂಡಿಲ್ಲ. ಕಾರ್ಪೊರೇಷನ್ನಿನ ಕಾನೂನು ಅಧಿಕಾರಿಗಳು ಕ್ರಿಯಾ ಶೀಲರಾಗಿಲ್ಲ, ಕಳೆದ ಬಾರಿ ವಿಧಾನ ಸಭೆಯಲ್ಲಿ ಈ ಪ್ರಶ್ನೆ ಎತ್ತಿದ್ದೆ, ಆಗಲೂ ಸಹ ಒಂದೇ ಉತ್ತರ. ಆದ್ದರಿಂದ ಈ ವಿಷಯದ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರು ಸ್ಪಷ್ಟ ಉತ್ತರ ನೀಡಬೇಕಾಗಿ ವಿನಂತಿ.

ಶ್ರೀ ಸಿದ್ದರಾಮಯ್ಯ.—ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಮಾನ್ಯ ಸದಸ್ಯರಿಗೆ ಉತ್ತರವನ್ನು ತರಿಸಿ ಕೊಡುತ್ತೇನೆ.

ಗ) ಬೆಂಗ್ರೆಯಲ್ಲಿನ್ನೆಮೀನನ್ನು ಒಣಗಿಸಿರುವವರು ಮೇಲೆ ಅಧಿಕಾರಿಗಳು ದಬ್ಬಾಳಿಕೆ ನಡೆಸುತ್ತಿರುವುದು

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಮಂಗಳೂರಿನ ಧಕ್ಕೆಯಲ್ಲಿ ಅದೇ ರೀತಿ ಬೆಂಗ್ರೆ ಯಲ್ಲಿ ಸಾವಿರಾರು ಜನರು ಮೀನುಗಾರಿಕಾ ಕಸಬು ಮಾಡಿಕೊಂಡು ಜೀವಿಸುತ್ತಿದ್ದಾರೆ. ಆದರಲ್ಲಿ ಒಣಮೀನು ವ್ಯವಸಾಯದವರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಬೆಂಗ್ರೆಯಲ್ಲಿ ಅಲ್ಲಲ್ಲಿ ಮೀನನ್ನು ಒಣಗಿ ಸುತ್ತಿದ್ದಾರೆ. ಅದೇ ರೀತಿ ಮಂಗಳೂರು ಧಕ್ಕೆಯ ಎದುರಿಗೆ ನದಿಯ ಮಧ್ಯದ ಪ್ರದೇಶದ ದಿಣ್ಣೆಗಳಲ್ಲಿ ಕೂಡ ಕಳೆದ ನಾಲ್ಕು ವರ್ಷಗಳಿಂದ ಒಣ ಮೀನನ್ನು ಒಣಗಿಸುತ್ತಿದ್ದಾರೆ. ಇದೀಗ ಹಳೆ ಬಂದರಿನ ಮುಖ್ಯ ಅಧಿಕಾರಿ ಮತ್ತು ಇನ್ನಿತರ ಅಧಿಕಾರಿಗಳು ಬೆಂಗ್ರೆ ಮತ್ತು ನದಿಯ ಮಧ್ಯದ ದಿಣ್ಣೆಯಲ್ಲಿ ಒಣ ಮೀನು ಒಣಗಿಸುವವರ ಮೇಲೆ ಅ ಮಾನುಷ ದಬ್ಬಾಳಿಕೆ ಮಾಡುತ್ತಿದ್ದಾರೆ. ಒಣಮೀನು ವ್ಯವಸಾಯ ದವರ ಸಾವಿರಾರು ರೂಪಾಯಿ ಬೆಲೆ ಬಾಳುವ ಬುಟ್ಟಿಗಳನ್ನು, ಕುಕ್ಕೆಗಳನ್ನು, ನಾರಿನ ಚಾಪೆಗಳನ್ನು ಇನ್ನಿತರ ಸಾಮಗ್ರಿಗಳನ್ನು ಅಧಿಕಾರಿಗಳು ದೋಚಿಕೊಂಡು ಹೋಗಿ, ಅವರ ಶೆಡ್ಡುಗಳನ್ನು ಸಂಪೂರ್ಣ ಕೆಡವಿ ಕಿರುಕುಳ ಕೊಡುತ್ತಿದ್ದಾರೆ. ಇದು ಬಡ ಮೀನುಗಾರರ ಮೇಲೆ ದೊಡ್ಡ ಆಘಾತ. ಆದ ಕಾರಣ ಮೀನು ವ್ಯವಸಾಯದ ಒಣಮೀನು ಕೆಲಸಗಾರರಿಗೆ ಹಳೆ ಬಂದರಿನ ಅಧಿಕಾರಿಗಳು ತೊಂದರೆ ಕೊಡದಂತೆ ಆದೇಶ ನೀಡಬೇಕು. ಅನೇಕ ವರ್ಷಗಳಿಂದ ಮೀನು ಒಣಗಿಸುತ್ತಿದ್ದಂತೆ ಮುಂದೆಯೂ ಮೀನು ಒಣಗಿಸಲು ಬಿಡಬೇಕು. ಈ ಕುರಿತು ಮೀನುಗಾರಿಕಾ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೃಷ್ಣ.—ಮಾನ್ಯ ಅಧ್ಯಕ್ಷರೇ, ಇದಕ್ಕೆ ಉತ್ತರ ಇನ್ನೂ ಬಂದಿಲ್ಲ, ಮಾನ್ಯ ಸದಸ್ಯರಿಗೆ ಉತ್ತರವನ್ನು ತರಿಸಿ ಕೊಡುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—(ಸದಸ್ಯರು ಹಾಜರಿಲ್ಲ)